ಕಲಿಯುವ ಪ್ರೀತಿಯುಳ್ಳವರಿಗಾಗಿ

# ಸಂಪದ

೭ ಕನ್ನಡ

ಶೈಕ್ಷಣಿಕ ಸಂಪನ್ಮೂಲ ಸಂಚಿಕೆ –೪/ಜನವರಿ–ಫೆಬ್ರವರಿ–ಮಾರ್ಚ್ ೨೦೧೭–೧೮

ಈ ಸಂಚಿಕೆಯಲ್ಲಿ .......

ಧ್ವನಿ
ಶೈಕ್ಷಣಿಕ ಸಂಪನ್ಮೂಲ ಕೇಂದ್ರ
Dhwani Educational Resource Centre

* 'ಹೃದಯ ವಚನಗಳು' ಪಾಠಕ್ಕೆ ಪೂರಕ ಸಂಪನ್ಮೂಲ – ೧
* 'ಕಿತ್ತೂರ ಕೇಸರಿ' ಪಾಠಕ್ಕೆ ಪೂರಕ ಸಂಪನ್ಮೂಲ – ೩



## ಅಮೃತ ಸೋಮೇಶ್ವರರನ್ನು ಹುಡುಕುತ್ತ .....

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಬಳಿಯ ಕೋಟೆಕಾರು ಗ್ರಾಮದ 'ಅಡ್ಕ'ವು ಶ್ರೀ ಅಮೃತರ ಹುಟ್ಟೂರು. ಶ್ರೀ ಚೆರಿಯಂಡ ಮತ್ತು ಶ್ರೀಮತಿ ಅಮುಣಿಯವರ ಸುಪುತ್ರರಾಗಿ ದಿನಾಂಕ ೨೭/೯/೧೯೩೫ ರಂದು ಜನಿಸಿದರು. ಸೋಮೇಶ್ವರರು ತಮ್ಮ ಬಾಲ್ಯವನ್ನು 'ಅಡ್ಕ ಶ್ರೀ ಭಗವತಿ' ದೇವಳದ ಪರಿಸರದಲ್ಲಿ ಕಳೆದರು.

ಕೋಟೆಕಾರಿನ 'ಸ್ಟೆಲ್ಲಾ ಮೇರಿಸ್ ಕಾನ್ವೆಂಟ್'ನಲ್ಲಿ ಇವರ ಪ್ರಾಥಮಿಕ ಶಿಕ್ಷಣ, ಪ್ರೌಢ ಶಿಕ್ಷಣ ಕೋಟೆಕಾರಿನ 'ಆನಂದಾಶ್ರಮ ಹೈಸ್ಕೂಲ್'ನಲ್ಲಿ (೧೯೪೬–೧೯೫೪). ಪದವಿ ವ್ಯಾಸಂಗ ಮಂಗಳೂರಿನ ಸಂತ ಎಲೋಶಿಯಸ್ ಕಾಲೇಜ್‌ನಲ್ಲಿ ಪಡೆದರು. ೧೯೫೮ರಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯದಿಂದ ಚಿನ್ನದ ಪದಕದೊಂದಿಗೆ ಕಲಾಪದವಿಯನ್ನು ಪಡೆದರು. ಆನಂತರ ತಾವು ಓದಿದ ಕಾಲೇಜಿನಲ್ಲಿಯೇ ಉಪನ್ಯಾಸಕರಾಗಿ ಮೊದಲ ವೃತ್ತಿ ಜೀವನ ಆರಂಭಿಸಿದರು. ಜೊತೆಗೆ ಧಾರವಾಡ 'ಕರ್ನಾಟಕ ವಿಶ್ವವಿದ್ಯಾಲಯ'ದಿಂದ ಖಾಸಗಿಯಾಗಿ ಕನ್ನಡ ಎಂ.ಎ. ಪದವಿ ಪಡೆದರು. ೧೯೬೫ರಲ್ಲಿ ಪುತ್ತೂರಿನ ಸಂತ ಫಿಲೋಮಿನಾ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದರು. ಆನಂತರ ೧೯೬೭ರಿಂದ ಪುತ್ತೂರಿನ ವಿವೇಕಾನಂದ ಕಾಲೇಜಿನಲ್ಲಿ ಉಪನ್ಯಾಸಕರಾಗಿ, ಕನ್ನಡ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿ ೩೧/೭/೧೯೯೩ರಂದು ಇಲ್ಲಿಯೇ ಸೇವಾನಿವೃತ್ತಿಯನ್ನು ಹೊಂದಿದರು.

ವಿಶಾಲವಾದ ಕಡಲು, ಬೆಟ್ಟ ಗುಡ್ಡಗಳಿಂದ ಆವೃತವಾದ ವನಸಿರಿ ಇವು ಬಾಲಕ ಅಮೃತರ ಮೇಲೆ ಗಾಢವಾದ ಪರಿಣಾಮವನ್ನು ಉಂಟುಮಾಡಿರುವುದರಲ್ಲಿ ಸಂಶಯವಿಲ್ಲ. ಜೊತೆಗೆ ತಮಿಳುನಾಡಿನ ಸಂಸ್ಕೃತಿ – ಕಲೆಗಳು ಅವರ ಮುಂದಿನ ಸಾಹಿತ್ಯಾಸಕ್ತಿಗೆ ಪ್ರೇರಣೆ ನೀಡಿರಬಹುದು. ಎಳವೆಯ ಹಂತದಲ್ಲಿಯೇ ಭಜನೆಯ ಧಾಟಿ, ಅನುಕರಣಾ ಪದ್ಯರಚನೆಗಳಲ್ಲಿ ತೊಡಗಿದ್ದ ಇವರು ೯ನೇ ತರಗತಿಯಲ್ಲಿದ್ದಾಗಲೇ ಮುದ್ದಣನ 'ಅದ್ಭುತ ರಾಮಾಯಣ'ದ ಆಧಾರದಿಂದ ಭಾಮಿನಿ ಷಟ್ಪದಿಯಲ್ಲಿ 'ಶ್ರೀಮತಿ ಪರಿಣಯ' ಎನ್ನುವ ಕಿರುಕಾವ್ಯವನ್ನು ರಚಿಸಿದ್ದರು.

ತಮ್ಮ ಗುರುಗಳಾದ ಅಮ್ಮೆಂಬಳ ಶಂಕರನಾರಾಯಣ ನಾವಡರ ಪ್ರೇರಣೆಯಿಂದ ತಾವೇ ರಚಿಸಿದ ಪದ್ಯ, ಕಥೆ, ಪ್ರಬಂಧಗಳನ್ನು "ಪಂಚಾಮೃತ" ಶೀರ್ಷಿಕೆಯ ಹಸ್ತಪ್ರತಿಯ ಕೃತಿ ಸಂಕಲನ ಹೊರ ತಂದರು. ಮುಂದೆ "ಸುದರ್ಶನ" "ಚಿತ್ರಗುಪ್ತ" ಮೊದಲಾದ ಕವನ ಸಂಕಲನಗಳನ್ನು ಪ್ರಕಟಿಸಿದರು. ಸಮಾಜದ ಕಥಾವಸ್ತುವನ್ನೊಳಗೊಂಡ "ತನಿಯ–ಗುರುವರ ಕಾಳಗ" ಎನ್ನುವ ಕಿರು ಪ್ರಸಂಗವನ್ನು ರಚಿಸಿ ತಮ್ಮ ಎಸ್.ಎಸ್.ಎಲ್.ಸಿ.ಯ ಬೀಳ್ಕೊಡುಗೆ ಸಮಾರಂಭದಲ್ಲಿ ಅಭಿನಯಿಸಿದರು. 'ಶಕುಂತಳಾ ಸಂದರ್ಶನ' ಹಾಗೂ 'ಚಂದ್ರಹಾಸ ಚರಿತ್ರೆ' ಎಂಬ ಪ್ರಸಂಗಳನ್ನು ರಚಿಸಿ ಅಭಿನಯಿಸುವದರ ಮೂಲಕ ಯಕ್ಷಗಾನ ನಾಟಕಗಳನ್ನು ತಮ್ಮ ವಿಶೇಷ ಆಸಕ್ತಿಯನ್ನು ಪ್ರದರ್ಶಿಸಿದ್ದಾರೆ.

ಅಮೃತ ಸೋಮೇಶ್ವರರು ಕವನ, ಕಾದಂಬರಿ, ನಾಟಕ, ವಿಮರ್ಶೆ, ಯಕ್ಷಗಾನ ಪ್ರಸಂಗ, ಬಿಡಿಲೇಖನಗಳು ಹೀಗೆ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಐವತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಅಷ್ಟೇ ಅಲ್ಲದೆ, ೩೫ಕ್ಕೂ ಹೆಚ್ಚು ಯಕ್ಷಗಾನ ಕೃತಿ, ರೇಡಿಯೋ ನಾಟಕಗಳನ್ನು ರಚಿಸಿದ್ದಾರೆ. ಅವರಿಗೆ ಅಕಾಡಮಿ ಬಹುಮಾನ ದೊರೆತಿದೆ. ಇವರ "ತುಳು ಪಾಡ್ದನ ಕಲೆಗಳು" ಮತ್ತು "ತುಳು ಪಾಡ್ದನ ಸಂಪುಟಗಳು" ಪ್ರಶಸ್ತಿ ಗಳಿಸಿವೆ. ಅಲ್ಲದೆ "ಅಪಾರ್ಥನಿ" ಎನ್ನುವ ಕುಚೋದ್ಯ ಶಬ್ದಕೋಶ ಆರ್ಯಭಟ ಪ್ರಶಸ್ತಿ ಗಳಿಸಿದೆ. ಇವರ ತುಳು ಮತ್ತು ಕನ್ನಡ ಭಾಷೆಯ ಹಲವಾರು ಪ್ರಸಂಗ, ನಾಟಕ, ಕವನಗಳ ೬೦ ಕ್ಕೂ ಹೆಚ್ಚು ಧ್ವನಿಸುರುಳಿಗಳು ಬಿಡುಗಡೆಗೊಂಡಿವೆ.

ಈಗ ಶ್ರೀಯುತರು ತಮ್ಮ ಎಂಬತ್ತರ ಹರೆಯದಲ್ಲಿಯೂ ಚಟುವಟಿಕೆಯಿಂದಿದ್ದು ಅಧ್ಯಾಪಿಕೆ ಪತ್ನಿ ನರ್ಮದಾ ಉಚ್ಚಿಲ, ಮಕ್ಕಳಾದ ಚೇತನಕುಮಾರ ಮತ್ತು ಜೀವನ್‌ರವರೊಂದಿಗೆ ಆದರ್ಶಯುತ ಕೌಟುಂಬಿಕ ಜೀವನ ನಡೆಸುತ್ತಿದ್ದಾರೆ.

**ಅಮೃತ ಸೋಮೇಶ್ವರರ ಕೆಲವು ಕೃತಿಗಳು:** * ಕಥಾಸಂಕಲನ : ಎಲೆಗಾಳಿ, ಕೆಂಪು ನೆನಪು, ಮಾನವತೆ ಗೆದ್ದಾಗ * ಕವನ ಸಂಕಲನ : ಮನಮಾಲೆ, ಭ್ರಮಣ, ಉಪ್ಪಗಾಳಿ * ಕಾದಂಬರಿ : ತೀರಿದ ತೆರೆ * ವಿಮರ್ಶೆ : ನಂದಳಿಕೆಯ ನಂದಾದೀಪ, ರಾಜರತ್ನಂ ಕವಿತೆಗಳು * ಯಕ್ಷಗಾನ ಕೃತಿಗಳು : ಅಮರಶಿಲ್ಪ, ಆದಿಕವಿ ವಾಲ್ಮೀಕಿ, ಚಕ್ರೇಶ್ವರ

**ಪ್ರಶಸ್ತಿ ಗೌರವಗಳು:** ಕರ್ನಾಟಕದ ರಾಜ್ಯೋತ್ಸವ ಪ್ರಶಸ್ತಿ, ಆಕಾಶವಾಣಿ ಪ್ರಶಸ್ತಿ, ಪಾರ್ತಿಸುಬ್ಬ ಪ್ರಶಸ್ತಿ, ತುಳು ಅಕಾಡಮಿ ಪ್ರಶಸ್ತಿ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಕುಕ್ಕಿಲ ಪ್ರಶಸ್ತಿ, ನುಡಿಸಿರಿ ಸಾಹಿತ್ಯ ಪ್ರಶಸ್ತಿ, ಶ್ರೀ ಕನ್ನಡ ಸಾಹಿತ್ಯ ಸಮ್ಮೇಳನ ಪ್ರಶಸ್ತಿ, ಇತ್ಯಾದಿ

* ಜೊತೆಗೆ 'ಅಮೃತ ಸೋಮೇಶ್ವರ ಅಭಿನಂದನ ಸಮಿತಿ – ಕಲಾಗಂಗೋತ್ರಿ'ಯು "ಸಿರಿ" ಎಂಬ ಅಮೃತರ ಜೀವನ ಚರಿತ್ರೆ ಆಧರಿಸಿದ ಅಭಿನಂದನಾ ಗ್ರಂಥವನ್ನು ಅರ್ಪಿಸಿದೆ. *

# ಅಮೃತ ಸೋಮೇಶ್ವರರ 'ಹೃದಯ ವಚನಗಳು' ಪುಸ್ತಕದಿಂದ ಆಯ್ದ ವಚನಗಳು

೧. ಎನ್ನ ಹೃದಯ ಕೇಂದ್ರದಿಂದೆ ಉತ್ತಮ
ಕಾರ್ಯಕ್ರಮಗಳೆ ಪ್ರಸಾರವಾಗಲಯ್ಯ
ಅನ್ಯ ಕೇಂದ್ರಗಳಿಂದೆ ಸೊಗಸಾದುದೇ ತೇಲಿ ಬರಲಯ್ಯ
ಸದಭಿರುಚಿಯ ಊರ್ಜಿತವಿರಲಿ, ನಡುನಡುವೆ ಅಡಚಣೆ ಬಾಧಿಸದಿರಲಿ
ಚಿದಾನಂದ ರಸಿಕ ಹೃದಯೇಶ ಸೋಮೇಶಾ

೨. ಮೆತ್ತಗಿಡು ಹೆಜ್ಜೆಗಳ ಮೆಟ್ಟದಿರು ಹೃದಯಗಳ,
ನಿನ್ನ ಗಮನ ಸಂಭ್ರಮದಲ್ಲಿ
ಹದವರಿತು ಪದವಿಡುವುದೇ ಪದುಳವಯ್ಯ
ಇದನರಿಯದೆ ನಿರ್ಲಕ್ಷ ಭಂಡತನದಿ ಧೀಂಕಿಡುವ
ಉದ್ದಂಡರನು ಮೆಚ್ಚನಾ ಹೃದಯೇಶ ಸೋಮೇಶ

೩. ಗಟ್ಟಿಗೊಳ್ಳಲೆ ಹೃದಯ! ಕೇವಲ ಮೃದುತೆ ಹದುಳಿಸದು!
ಚಿವುಟುವವರುಂಟು, ಬರೆಯೆಳೆವರುಂಟು, ತೊತ್ತಳತುಳಿವರುಂಟು
ಮಾರ್ದವಕೆ ಪೆದ್ದುತನವನಾರೋಪಿಸಿ ನಗುವರುಂಟು
ಬಲರಸಾಯನವಿತ್ತು ದೌರ್ಬಲ್ಯ ಕ್ಷುದ್ರತೆಯ ನೀಗಿಸು
ಹೃದಯೇಶ ಸೋಮೇಶಾ

೪. ಗುರುಹಿರಿಯರ ಶಾಪದಿಂದೆ ಕೇಡಡಸುವುದೆಂಬರು
ದೇವದೈವರುಗಳ ಕಾಟದಿಂದೆ ಕಡುಕಷ್ಟವೆಂಬರು
ನವಗ್ರಹದ ಬಾಧೆಯಿಂದೆ ಭಾಗ್ಯ ವಕ್ರಿಪುದೆಂಬರು
ಗುರುದೈವಗಳಿಗೆ ಹೃದಯವಿರ್ದಡೆ ಅವರೇಕೆ ಮುನಿವರಯ್ಯ
ವಿಕಾರರಹಿತ ಹೃದಯೇಶ ಸೋಮೇಶಾ?

೫. ಬುದ್ಧಿ ಮುಂದೋಡುತಿದೆ ಹೃದಯ ಹಿಂದುಳಿದಿಹುದು
ಇವುಗಳೊಳಗೆಲ್ಲಿಹುದು ತಾಳಮೇಳ?
ಸಮಪದಗತಿಯಿಲ್ಲದೊಡೆ ಕೂಡುಬಾಳ್ವೆ ಪಾಡುಗೆಡುವುದಯ್ಯ
ಬುದ್ಧಿ ಹೃದಯಗಳನೊಂದೆ ತಾಳಕೆ ಹೊಂದಿಸು
ಜಗನ್ನಾಟ್ಯ ನಟುವರೇಣ್ಯ ಹೃದಯೇಶ ಸೋಮೇಶಾ

೬. ಮದುವೆಯ ಮನೆಗೆ ಮುದದಿಂದೆ ತೆರಳುವರು
ಮರಣದ ಮನೆಗೈದಲು ಹಿಂಜರಿವರಯ್ಯ
ಮದುವೆ ಮನೋಲ್ಲಾಸಕಾರಕ ಮರಣ ಹೃದಯ ಸಂಸ್ಕಾರಕಾರಕ
ಎದೆಯ ಹದಕೆ ಎರಡೂ ಒದಗಬೇಕಲ್ಲವೆ ಹೃದಯೇಶ ಸೋಮೇಶಾ?

೭. ಹೃದಯ ಸೂಕ್ಷ್ಮಗಳನೆಲ್ಲ ಬಲ್ಲನೆಂಬ ಹೃದಯವೈದ್ಯ
ಅದರ ನರನಾಡಿಗಳ ನೇರ್ಪುಗೊಳಿಪ ನೈಪುಣ್ಯ ತೋರಬಲ್ಲ
ಹೃದಯವನೆ ಕದಲಿಸಿ ಬದಲೊಂದನು ಬೆಸೆಯಬಲ್ಲ
ಆದರೆ ಹೃದಯದ ಹೃದಯವನು ಮುಟ್ಟಬಲ್ಲನೆ ಹೃದಯತಜ್ಞವರೇಣ್ಯ
ಹೃದಯೇಶ ಸೋಮೇಶಾ?

೮. ಹೃದಯವ ಕದ್ದೆನೆಂಬರು ಕೆಲರು
ಹೃದಯವ ಗೆದ್ದೆನೆಂಬರು ಕೆಲರು
ಹೃದಯವ ಸ್ಪರ್ಶಿಸಿದೆನೆಂಬರು ಕೆಲರು
ಹೃದಯವ ದರ್ಶಿಸಿದೆನೆಂಬರು ಕೆಲರು
ಹೃದಯದ ಎಲ್ಲೆಯನು ಕಂಡವರಿಲ್ಲವಾಗಿ,
ಈಯೆಲ್ಲವೂ ಬಾಯುಪಚಾರವಲ್ಲದೆ ಸತ್ಕ್ರಿಯೆಯಪ್ಪುದೇ
ಹೃದಯೇಶ ಸೋಮೇಶಾ?


ಅಮೃತ ಸೋಮೇಶ್ವರ ಅವರ ಕುಟುಂಬ



# ಧ್ವನಿ ಸಂಪನ್ಮೂಲ ಕೇಂದ್ರದಲ್ಲಿ ಕವಿ ಪ. ಗು. ಸಿದ್ಧಾಪುರ

'ಕಿತ್ತೂರ ಕೇಸರಿ' ಕವನ ರಚಿಸಿದ ಕವಿ ಪ. ಗು. ಸಿದ್ಧಾಪುರ ಅವರನ್ನು ಫೋನ್ ಮೂಲಕ ಸಂಪರ್ಕಿಸಿದೆವು. 'ಸಂಪದ'ಕ್ಕಾಗಿ ಅವರ ಸಂದರ್ಶನ ಅವಕಾಶ ಕೇಳಿದೆವು. ಶ್ರೀಯುತರು ತಕ್ಷಣ ಪ್ರೀತಿಯಿಂದ ಒಪ್ಪಿಕೊಂಡರು. "ಬಾಲವಿಕಾಸ ಅಕಾಡೆಮಿಯ ಗೌರವ ಪ್ರಶಸ್ತಿಗೆ ಆಯ್ಕೆಯಾಗಿದ್ದು ಧಾರವಾಡಕ್ಕೆ ನಾನೇ ೨೧-೧೨-೧೭ರಂದು ಬರುತ್ತೇನೆ. ಆಗ ಧ್ವನಿ ಸಂಪನ್ಮೂಲ ಕೇಂದ್ರಕ್ಕೆ ಬಂದು ನಿಮ್ಮೊಂದಿಗೆ ಮಾತನಾಡಲು ಸಂತೋಷ ಪಡುತ್ತೇನೆ" ಎಂದು ತುಂಬ ವಿಶ್ವಾಸದಿಂದ ತಿಳಿಸಿದರು.

ಅದರಂತೆ ೨೧-೧೨-೧೭ರಂದು ಧ್ವನಿ ಸಂಪನ್ಮೂಲ ಕೇಂದ್ರಕ್ಕೆ ಬಂದು, ಸುಮಾರು ಹದಿನೈದು ಇಪ್ಪತ್ತು ನಿಮಿಷ ನಮ್ಮೊಂದಿಗೆ ಇದ್ದರು. ಆಗ ನಮ್ಮ ಕೋರಿಕೆಯಂತೆ 'ಕಿತ್ತೂರ ಕೇಸರಿ' ಕವನವನ್ನು ಬಹಳ ಸ್ವಾರಸ್ಯಕರವಾಗಿ ಮತ್ತು ತುಂಬಾ ಶಕ್ತಿಯುತವಾಗಿ ವಾಚನ ಮಾಡಿದರು. ತಮಗೆ ಇದ್ದ ಕಡಿಮೆ ಸಮಯದಲ್ಲಿಯೂ ಧ್ವನಿಯ ಉದ್ದೇಶ, ಸಂಪನ್ಮೂಲಗಳನ್ನು ಅರ್ಥ ಮಾಡಿಕೊಂಡು ಪ್ರೋತ್ಸಾಹದಾಯಕ ಶುಭನುಡಿಗಳನ್ನು ಆಡಿದರು. ಇದರಿಂದ ಧ್ವನಿ ಬಳಗಕ್ಕೂ ಸಹಜವಾಗಿ ಸಂತಸವಾಯಿತು.

ಇಲ್ಲಿ ಶ್ರೀಯುತರ ಸಂಕ್ಷಿಪ್ತ ಪರಿಚಯ ಇದೆ. ಕವಿಗಳೇ ವಾಚನ ಮಾಡಿದ ವಿಡಿಯೋ ಭಾಗಗಳನ್ನು 'ಧ್ವನಿ ಮಿತ್ರರು' ವಾಟ್ಸ್ಆ್ಯಪ್ ಗುಂಪಿಗೆ ಕಳುಹಿಸಿರುತ್ತೇವೆ. ಅದನ್ನು ಪಾಠ ಸಂದರ್ಭದಲ್ಲಿ ಬಳಸಿಕೊಳ್ಳಬಹುದು.

ಬಾ ಬಾ ಚಿಟ್ಟೆ  
ಬಣ್ಣದ ಚಿಟ್ಟೆ  
ಎಲ್ಲಿಗೆ ಹೊರಟಿರುವೆ?  
ಹೆದರುವಿ ಏಕೆ  
ಪರಿಮಳ ಬೇಕೆ?  
ಈಗಲೆ ನಾ ತರುವೆ

ಸದಾ ಮಕ್ಕಳ ಬಾಯಲ್ಲಿ ಗುನುಗುಡುವ ಇಂತಹ ನೂರಾರು ಕವನಗಳನ್ನು ಬರೆದು ಮಕ್ಕಳ ಮನಸ್ಸಿನಲ್ಲಿ ನೆಲೆಯಾಗಿರುವ ಕವಿ ಪ. ಗು ಸಿದ್ಧಾಪುರ. ಇವರ ತಂದೆ ಶ್ರೀ ಗುರುಪಾದಪ್ಪ, ತಾಯಿ ಶ್ರೀಮತಿ ಯಮುನಾಬಾಯಿ. 1958ರಲ್ಲಿ ತಾಯಿಯ ತವರೂರಾದ ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕಿನ ದಾಶಾಳದಲ್ಲಿ ಜನನ.

ಬಾಲಕ ಪರಗೊಂಡ ಅವರ ಪ್ರಾಥಮಿಕಶಿಕ್ಷಣ ದಾಶಾಳದಲ್ಲಿ ಮತ್ತು ಪ್ರೌಢಶಾಲಾ ಶಿಕ್ಷಣ ಬಬಲೇಶ್ವರದಲ್ಲಿ ನಡೆಯಿತು. ಪರಗೊಂಡ ಅವರ ಬಾಲ್ಯದಲ್ಲಿಯೇ ತಾಯಿ ಯಮುನಾಬಾಯಿಯವರು ಕ್ಷಯರೋಗಕ್ಕೆ ತುತ್ತಾದರು. ಈ ಬಗ್ಗೆ ಪ್ರೊ. ರಾ.ಶಿ ವಾಡೇದ ಅವರು 'ಮಕ್ಕಳ ಚಂದಿರ' ಗ್ರಂಥದಲ್ಲಿ "ರೋಗದ ಭೀಕರತೆಯನ್ನು ಅರಿತ ತಾಯಿ ತನ್ನ ಮಗನ ಸಮೀಪಕ್ಕೆ ಹೋಗದೆ, ಆತನ ಆಟ ಪಾಠವನ್ನು ದೂರದಿಂದಲೇ ನೋಡಿ ಖುಷಿ ಪಡುತ್ತಿದ್ದಳು" ಎಂದು ದಾಖಲಿಸಿದ್ದಾರೆ.

ತಾಯಿ ಇಲ್ಲದೆ ತಬ್ಬಲಿಯಾದ ಮಗುವಿಗೆ ಗುರುಪಾದಪ್ಪನವರೇ ತಂದೆಯಾಗಿ, ತಾಯಿಯಾಗಿ ತಮ್ಮ ಆಸೆ ಆಕಾಂಕ್ಷೆಗಳನ್ನು ಬದಿಗಿಟ್ಟು ತಮ್ಮ ಮಗನ ಭವಿಷ್ಯ ರೂಪಿಸಿದರು. ತಂದೆಯ ಪ್ರೀತಿಯನ್ನು ತುಂಬಾ ಭಾವುಕವಾಗಿ ಸ್ಮರಿಸುತ್ತಾ ಪ.ಗು. ಸಿದ್ಧಾಪುರ ಅವರು ಹೀಗೆ ಬರೆಯುತ್ತಾರೆ:

ಅನುದಿನ ನೆನೆಯುವೆ ನಿನ್ನನು ಅಪ್ಪ  
ನನ್ನಯ ಪಾಲಿನ ಸಕ್ಕರೆ ತುಪ್ಪ  
ದಿನಬೆಳಗಾದರೆ ನನ್ನನು ಹೊತ್ತು  
ಹಾಕುತಲಿದ್ದೆ ಊರಲಿ ಸುತ್ತು !  
ನೆಟ್ಟರೆ ನನ್ನಯ ಕಾಲಿಗೆ ಹರಳು  
ಮಿಡುಕುವುದಾಗಲೆ ನಿನ್ನಯ ಕರುಳು !  
ನನ್ನಯ ಪಾಲಿನ ದೇವರು ನೀನೆ !  
ನಿನ್ನಯ ಕರುಣೆಯ ಕಂದನು ನಾನೆ!!  
ಅಳೆಯಲಿಕಾಗದು ನಿನ್ನಯ ಪಾತ್ರ  
ನನ್ನೀ ಪ್ರಗತಿಗೆ ನೀನೇ ಸೂತ್ರ!

ಈ ಕವವನವನ್ನು ಸಿದ್ಧಾಪುರ ಅವರು ತುಂಬಾ ಭಾವ ತುಂಬಿ ಧ್ವನಿ ಕೇಂದ್ರದಲ್ಲಿಯೂ ಕೂಡ ಹೇಳಿದ್ದರು.

ಪ.ಗು. ಅವರಿಗೆ ಬಾಲ್ಯದಿಂದಲೇ ಚಿತ್ರಕಲೆಯಲ್ಲಿ ಆಸಕ್ತಿ ಇದ್ದಿತು. ೧೯೭೫-೭೬ರಲ್ಲಿ ಗದುಗಿನ ವಿಜಯ ಕಲಾಮಂದಿರದಲ್ಲಿ ಚಿತ್ರಕಲೆ ಅಧ್ಯಯನ ಮಾಡಿ ಪದವಿ ಪಡೆದರು. ನಂತರ ಮುಳವಾಡದ ಶ್ರೀಮಲ್ಲಿಕಾರ್ಜುನ ಪ್ರೌಢಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ವೃತ್ತಿ ಜೀವನ ಆರಂಭಿಸಿದರು.

ಚಿತ್ರಕಲೆಯಲ್ಲಿ ತಮ್ಮ ಬಣ್ಣಗಳ ಸಂಯೋಜನಾ ಕುಶಲತೆಯಿಂದ ವಿದ್ಯಾರ್ಥಿಗಳನ್ನು ಮಂತ್ರಮುಗ್ಧರನ್ನಾಗಿಸಿ ಮಕ್ಕಳ ಮನಸ್ಸನ್ನು ಗೆದ್ದಂತೆ, ಹಲವಾರು ಮಕ್ಕಳ ಪದ್ಯಗಳನ್ನು ರಚಿಸಿ ಚಿಣ್ಣರ ನಾಲಗೆಯಲ್ಲಿ ಸದಾ ಹರಿದಾಡುವಂತೆ ಮಾಡಿದ್ದಾರೆ.

ಗ್ರಾಮೀಣ ಹಿನ್ನೆಲೆಯಿಂದ ಬಂದ ಕವಿಗೆ ಗ್ರಾಮೀಣ ಜೀವನ ಅನುಭವ ಪರಿಸರವೇ ತಮ್ಮ ಸಾಹಿತ್ಯ ಸಂಪನ್ಮೂಲವಾಗಿದೆ. ಪರಿಸರ ಕಾಳಜಿಯುಳ್ಳ ಇವರು ಪರಿಸರದ ಬಗ್ಗೆ ಅನೇಕ ಕವನಗಳನ್ನು ಬರೆದಿದ್ದಾರೆ.

ಪ.ಗು. ಅವರು ಕಥೆ, ಜೀವನ ಚರಿತ್ರೆ ಮುಂತಾದ ಸಾಹಿತ್ಯ ಪ್ರಕಾರಗಳಲ್ಲೂ ತಮ್ಮ ಛಾಪು ಮೂಡಿಸಿದ್ದಾರೆ.

ಆನೆ ಬಂತಾನಿ  
ಯಾವೂರಾನಿ?  
ಇಜಾಪುರ ಆನಿ  
ಇಲ್ಲಿಗ್ಯಾಕ ಬಂತು?  
ಹಾದಿ ತಪ್ಪಿ ಬಂತು

ಈ ಜನಪದ ಹಾಡನ್ನು ಆಧರಿಸಿ ವಿಜಯನಗರ ಸಾಮ್ರಾಜ್ಯದ ಅವನತಿಯ ಇತಿಹಾಸವನ್ನು ಕತೆಯಾಗಿ ಹೆಣೆದಿದ್ದಾರೆ. ಮೂಢನಂಬಿಕೆ, ಪ್ರಾಣಿ, ವ್ಯಕ್ತಿ ವಿಕಾಸ ಮುಂತಾದ ವಸ್ತುಗಳ ಸುತ್ತ ಅನೇಕ ಕತೆಗಳನ್ನು ಕಟ್ಟಿದ್ದಾರೆ.

ವಚನಸಾಹಿತ್ಯ ಶ್ರೀಯುತರ ಮೇಲೆ ಬಾಲ್ಯದಿಂದಲೂ ಪ್ರಭಾವ ಬೀರಿದೆ. ಈ ಸಾಹಿತ್ಯದ ಮೌಲ್ಯವನ್ನು ಅರಗಿಸಿಕೊಂಡ ಸಿದ್ಧಾಪುರ ಅವರು ನೂರಾರು ತ್ರಿಪದಿ ಹಾಗೂ ವಚನಗಳನ್ನು ರಚಿಸಲು ಸಾಧ್ಯವಾಗಿದೆ. ಅಲ್ಲಿ ಇವರು 'ಪ್ರಭುಲಿಂಗಪ್ರಿಯ ಗುರುಪಾದೇಶ್ವರಾ' ಎಂಬ ಅಂಕಿತವನ್ನು ಇಟ್ಟುಕೊಂಡಿದ್ದಾರೆ.

ಓದು ನಿಂತಿದೆ ಇಂದು  
ದೂರದರ್ಶನ ಬಂದು  
ಮೌನ ಮನೆಯೊಳಗೆಲ್ಲ.  
ಇಲ್ಲ ಚಿಣ್ಣರ ಸೊಲ್ಲು  
ದೂರದರ್ಶನದೇ ದರ್ಬಾರು!  
ಮಾತೆತ್ತಿದರೆ ಬೈಗುಳ ಹಾರ  
ನೋಡುವವರಿಗಿಲ್ಲ ಬೇಜಾರ  
ಹಾಳಾಯ್ತು ದೇಶೀ ಸಂಸ್ಕತಿ  
ತಲೆ ಎತ್ತಿದೆ ವಿದೇಶಿ ಸಂಸ್ಕೃತಿ  
ಪ್ರಭುಲಿಂಗಪ್ರಿಯ ಗುರುಪಾದೇಶ್ವರಾ....

ಶ್ರೀಯುತರ ಬರಹದ ಲಯಬದ್ಧ, ಆಕರ್ಷಕ ಶೈಲಿಯು ಎಲ್ಲಾ ಓದುಗರ ಗಮನ ಸೆಳೆಯುತ್ತದೆ. ಮಕ್ಕಳ ಕವನ ಸಂಕಲನಗಳು, ಕಥಾ ಸಂಕಲನ, ಪರಿಸರ ಗೀತೆಗಳು, ಜೀವನ ಚರಿತ್ರೆ, ತ್ರಿಪದಿಗಳು, ಆಧುನಿಕ ವಚನಗಳು ಮುಂತಾದ ಸಂಕಲನಗಳನ್ನು ಪ್ರಕಟಗೊಂಡು ಸಾಹಿತಿಗಳು ಹಾಗೂ ಓದುಗರ ಮೆಚ್ಚಿಗೆ ಪಡೆದು ಅನೇಕ ಪ್ರಶಸ್ತಿಗಳು ಲಭಿಸಿವೆ.

ಇವರ ಹಲವಾರು ಕವನಗಳು ಕರ್ನಾಟಕ, ಮಹಾರಾಷ್ಟ್ರ, ಕೇರಳ ರಾಜ್ಯ ಪಠ್ಯಪುಸ್ತಕದಲ್ಲಿ ಸ್ಥಾನ ಪಡೆದುಕೊಂಡಿವೆ.

ಒಬ್ಬ ಶಿಕ್ಷಕರ ಪ್ರತಿಭೆಯು ನಮ್ಮ ರಾಜ್ಯವಲ್ಲದೆ ಇತರ ರಾಜ್ಯಗಳಲ್ಲೂ ಬೆಳಗುವಂತೆ ಆದುದು ಹೆಮ್ಮೆ ಪಡುವ ಸಂಗತಿ.

*



ಧ್ವನಿ ಬಳಗದೊಂದಿಗೆ ಪ. ಗು. ಸಿದ್ದಾಪುರ ಅವರು (ಬಲದಿಂದ ಎರಡನೆಯವರು)

## ಪ. ಗು. ಸಿದ್ದಾಪುರ ಅವರ ಕೆಲವು ಕವನಗಳು

### ಚುಕ್ ಭುಕ್ ಗಾಡಿ!

ಚುಕ್ ಭುಕ್ ಗಾಡಿ ಚಿಣ್ಣರ ಗಾಡಿ
ಕಣ್ಮನ ತಣಿಸುವ ಬಣ್ಣದಗಾಡಿ
ಅಣ್ಣನು ಮಾಡಿದ ಬೆಂಡಿನ ಗಾಡಿ
ದುಡು ದುಡು ಓಡುವ ಗುಂಡನ ಗಾಡಿ

ಅಬ್ಬಾ! ಏನಿದು ಮಾವನ ಗಾಡಿ
ಎಲ್ಲರ ಹೊತ್ತು ಓಡುವ ಗಾಡಿ
ಘಲ್ ಘಲ್ ಎನ್ನುವ ಎತ್ತಿನ ಗಾಡಿ
ಸಂತಸಗೊಳಿಸುವ ಸುಂದರ ಗಾಡಿ

ಎಣ್ಣೆಯ ಬೇಡದ ಅಣ್ಣನ ಗಾಡಿ
ಕೀಲಿಯ ಕೊಟ್ಟರೆ ಓಡುವ ಗಾಡಿ
ಅತ್ತೆಯು ಕೊಡಿಸಿದ ಅಂದದ ಗಾಡಿ
ಥಳ ಥಳ ಹೊಳೆಯುವ ಬಿಳುಪಿನ ಗಾಡಿ

ಅಜ್ಜನ ಕೋಲೇ ತಮ್ಮನ ಗಾಡಿ
ಚಕಚಕ ಚಕಚಕ ಓಡುವ ಗಾಡಿ
ಚಂದದ ಗಾಡಿ ಚಲುವಿನ ಸ್ಕೂಟರ ಗಾಡಿ

ಚುಕ್ ಭುಕ್ ಗಾಡಿ ಚಿಣ್ಣರ ಗಾಡಿ
ಹತ್ತಿರಿ ಈಗ ಬಣ್ಣದ ಗಾಡಿ
ಊರನು ಸುತ್ತಿ ಬರುವುದು ಗಾಡಿ
ನಲಿಯುವ ಬನ್ನಿರಿ ಎಲ್ಲರು ಕೂಡಿ

### ಕಿಲಾಡಿ ಕಿಟ್ಟ

ಪುಟ್ಟ ಪುಟ್ಟ ಹೆಜ್ಜೆಯಿಡುತ
ಕಿಟ್ಟ ಬಳಿಗೆ ಬರುವನು
ತೊದಲು ನುಡಿಗಳನ್ನು ಆಡಿ
ನಕ್ಕು, ನಗಿಸಿ ನಲಿವನು

ಕೋಲನೂರಿ ಅಜ್ಜನಂತೆ
ಬಾಗಿ ಬಾಗಿ ನಡೆವನು
ಅಜ್ಜಿಯಂತೆ ಮೂಗು ಮುರಿದು
ಅಣಕ ಮಾಡಿ ಕುಣಿವನು

ಅಂಬೆಗಾಲನೂರಿ ಕಿಟ್ಟ
ಹೋರಿಯಂತೆ ಬರುವನು
ಢರಕೆ ಹೊಡೆದು ಕಣ್ಣು ಬಿರಿದು
ಎಲ್ಲರನ್ನು ಇರಿವನು.

ನಸುಕಿನಲ್ಲಿ ಅಮ್ಮನೊಡನೆ
ದಿನವು ಏಳು ತಿರುವನು
ಮಲಗಿದವರ ಮುಖಕೆ ಹೊಡೆದು
ನಿದ್ರೆ ಕೆಡಸಿ ನಗುವನು

ನಮ್ಮ ಮನೆಯ ಹೊಳೆವ ದೀಪ
ತುಂಟಕೋರ ಕಿಟ್ಟನು.
ಮೋಜು ಮಾಡಿ ಮನವ ತಣಿಸಿ
ನೋವು ಮರೆಸಿ ಬಿಡುವನು.

### ಸಂಕ್ರಾಂತಿ

ಸಂಕ್ರಾಂತಿ ಬಂತು
ಸಂತಸವ ತಂತು
ಹಗೆತನದ ಪರದೆ ಹರಿದು
ಎಳ್‌ಬೆಲ್ಲ ನೀಡಿ
ಹೊಸತನವು ಮೂಡಿ
ಭ್ರಾತೃ ಪ್ರೇಮವನು ಬೆಸೆದು!

ಮತ್ತರದ ಹೊಗೆಯು
ದೂಡಿದರೆ ನಗೆಯು
ಹೇಳುವುದು ಸಾರಿಸಾರಿ
ನಾವೆಲ್ಲರೊಂದು
ನೆನಪಿರಲಿ ಎಂದು
ಕುಸುರೆಳ್ಳು ಬೆಲ್ಲಸೇರಿ!

ಹೊಸಬಾಳ ಪಯಣ
ಸಾಗಿರಲು ತರಣ
ಅಬ್ಬರದ ತೆರೆಗಳ್ಹಲವು!
ಕನ್ನಡದ ಪುತ್ರ
ನೆನೆಪಿರಲಿ ಸೂತ್ರ
ಗುರಿಮುಟ್ಟಬೇಕು ನಾವು!

ಕತಲೆಯ ದೂಡಿ
ದಿನೆಕರನು ಮೂಡಿ
ಚೆಲ್ಲುವನು ಧರೆಗೆ ಬೆಳಕು
ಸುಖದುಃಖ ಸಮವು
ಸೋಲಿನಲಿ ಗೆಲುವು
ಬದುಕಿನಲಿ ಕಾಣಬೇಕು!

ಕೃತಜ್ಞನತೆಗಳು:
ಪ. ಗು. ಸಿದ್ದಾಪುರ – ನಂದನದಲಿ ಚಂದನ, ಮುಳುಗದ ಸೂರ್ಯ
ಪ್ರೊ. ರಾ.ಶಿ ವಾಡೇದ – ಮಕ್ಕಳ ಚಂದಿರ
(ಪ.ಗು. ಸಿದ್ದಾಪುರ ಅವರ ಬದುಕು–ಬರಹ)

ಪೂರಣ ಯೋಜನೆ
Poorana 2017-18 Project
is Supported by
Many Individual Donors

ಸಂಪರ್ಕ ಮಾಹಿತಿ:
ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
# 76, ‘ಪುಷ್ಪಾಂಜಲಿ’, 3ನೇ ಅಡ್ಡರಸ್ತೆ
ಶಿವಗಿರಿ, ಧಾರವಾಡ – 580007
ಮೊ: 998 666 1055
dhwanitrust@gmail.com
www.dhwanitrust.org

ಗಮನಿಸಿ : ಈ ಶೈಕ್ಷಣಿಕ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೇ ವಾಣಿಜ್ಯ ಉದ್ದೇಶಗಳಿಗಾಗಿ ಪುನರ್ಮುದ್ರಿಸುವುದಾಗಲೀ, ಬಳಸಿಕೊಳ್ಳುವುದಾಗಲೀ ನಿಷಿದ್ಧ. ಶೈಕ್ಷಣಿಕ ಉದ್ದೇಶದಿಂದ ಶಿಕ್ಷಕರು, ಪಾಲಕರು, ಸಂಪನ್ಮೂಲ ವ್ಯಕ್ತಿಗಳು ಇದನ್ನು ಉಪಯೋಗಿಸುವುದಾದರೆ ಧ್ವನಿ ಶೈ.ಸಂ.ಕೇಂದ್ರದ ಗಮನಕ್ಕೆ ತರುವುದು ಅಪೇಕ್ಷಣೀಯ.